( ದಿಃ 21.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದ.**

13. ನಾನು Computer sales and service ಉದ್ಯೋಗ ಮಾಡುತ್ತೇನೆ. ನಾನು ಸ್ವಂತ ಕಛೇರಿ ಹೊಂದಿರುವುದಿಲ್ಲ. ಆದರೆ ಯಾರು ಕೆಲಸಕ್ಕೆ ಕರೆಯುತ್ತಾರೆ ಹೋಗಿ ಕೆಲಸ ಮಾಡುತ್ತೇನೆ. ನಾನು Bsc(IT) ಪದವೀಧರ. ನನ್ನ ಮನೆಯು ಹುಬ್ಬಳ್ಳಿಯ ಬೆಂಗೇರಿಯ ಕಲ್ಲಣ್ಣವರ ಓಣಿಯಲ್ಲಿದೆ. ನಿಪಿ-45 ಮಹಜರ ಕಾಲಕ್ಕೆ ನಾನು ನನ್ನ ವಿಳಾಸವನ್ನು ನಭಿ ಕಾಲೋನಿ ಬಾಲಾಜಿನಗರ ಎಂದು ಹೇಳಿರುತ್ತೇನೆ. ಚಾಸಾಃ19 ನನಗೆ ಪರಿಚಯವಿದ್ದಾರೆ. ಅವರು ನನ್ನ ಕುಟುಂಬದ ಗೆಳೆಯರಾಗಿದ್ದು, ಅವರು ಕೇಶ್ವಾಪುರದ ನವೀನ ಪಾರ್ಕ ಬಳಿ ವಾಸವಾಗಿದ್ದಾರೆ.

14. ನನಗೆ ಮೊದಲಿಗೆ ಪೋಲಿಸರ ಪರಿಚಯ ಇರಲಿಲ್ಲ. ಮಹಜರಿಗೆ ಹಾಜರಾಗುವಂತೆ ನನ್ನನ್ನು ಕರೆದಾಗ ನಾನು ಹುಬ್ಬಳ್ಳಿಯ ವಿದ್ಯಾನಗರದಲ್ಲಿದ್ದೆನು. ಹುಬ್ಬಳ್ಳಿ ವಿದ್ಯಾನಗರದ ಮರಾಠಾ ಭವನದ ಬಳಿ ಇರುವ ಕ್ಯಾಂಟಿನಿನ ಬಳಿ ಇದ್ದೆನು. ಆಗ ನಾನು ಮತ್ತು ನನ್ನ ಗೆಳೆಯ ಇದ್ದೆವು. ಕ್ಯಾಂಟಿನ್ ಬಳಿ ನಾವಿಬ್ಬರಲ್ಲದೆ ಬೇರೆ ಹಲವು ಜನರು ಇದ್ದರು.

15. ವಿದ್ಯಾನಗರ ಪೋಲಿಸ ಠಾಣೆಯ ಅಕ್ಕಪಕ್ಕದಲ್ಲಿ ಮನೆಗಳು ಇವೆ ಎಂದರೆ ನಾನು ಗಮನಿಸಿರುವುದಿಲ್ಲ, ಆದರೆ ಇರಬಹುದು. ವಿದ್ಯಾನಗರದ ಪೋಲಿಸ ಕಾನ್ಸಟೇಬಲ್ ಗಳು ನನಗೆ ಪರಿಚಯ ಇರುವುದಿಲ್ಲ. ಪೋಲಿಸು ಬಂದು ನನ್ನನ್ನು ಮತ್ತು ಚಾಸಾಃ19 ರವರನ್ನು ಕರೆದರು ಬೇರೆಯವರನ್ನು ಕರೆದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾಃ19 ರವರು ಪುಸ್ತಕ ಮಳಿಗೆ ಹೊಂದಿದ್ದು, ಅವರು ಸಹ ಕಂಪ್ಯೂಟರ್ ಕೆಲಸ ಮಾಡುತ್ತಾರೆ. ನಾನು ಮತ್ತು ಚಾಸಾಃ18 ಮತ್ತು 19 ರವರು ಯಾವುದೇ ಕೆಲಸ ಮಾಡುವುದಿಲ್ಲ ಬದಲಿಗೆ ತಿರುಗಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

16. ಚಂದ್ರಶೇಖರ ಗುರುಜಿ ಮತ್ತು ಸಿಜಿ ಪರಿವಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರೆಸಿಡೆಂಟ್ ಹೊಟೇಲಿಗೆ ಹೋದಾಗ ನಾನು ಅಲ್ಲಿನ ಮ್ಯಾನೆಜರ್ ಅಥವಾ ಸಿಬ್ಬಂದಿಗಳನ್ನು ಭೇಟಿಯಾಗಲಿಲ್ಲ ಆದರೆ ಪೋಲಿಸರು ಭೇಟಿಯಾದರು. ಚಾಸಾಃ70 ಸಂತೋಷ ಇವರು ಹೊಟೆಲಿನ ಸಿಬ್ಬಂದಿ ಎಂದು ಪೋಲಿಸರು ಹೇಳಿದ ಕಾರಣ ನನಗೆ ತಿಳಿಯಿತು. ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ನೋಡಬೇಕು ಎಂದು ಪೋಲಿಸರು ಹೊಟೇಲಿನವರಿಗೆ ಲಿಖಿತವಾಗಿ ಹೇಳಿದರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

17. ನಾವು ಹೊಟೇಲಿಗೆ ಹೋಗುವಷ್ಟರಲ್ಲಿ ಅಲ್ಲಿನ ಸಿಬ್ಬಂದಿಯು ಪೆನ್ ಡ್ರೈವ ಗೆ ದೃಶ್ಯಾವಳಿಗಳನ್ನು ಹಾಕಿ ತಯಾರಿಸಿ ಇಟ್ಟಿದ್ದರು ಎಂದರೆ ಸರಿಯಲ್ಲ. ಸಿಸಿ ಕ್ಯಾಮರಾದ ವೈಯರಗಳು ಸರಿಯಾಗಿ ಇದೆಯೇ ಇಲ್ಲವೆ ಎಂದು ನಾನು ಮತ್ತು ಚಾಸಾಃ19 ನೋಡಿ ತಿಳಿದುಕೊಳ್ಳಲಿಲ್ಲ.

18. ದಿಃ 17.07.2022 ರಂದು ನಾನು ಮತ್ತು ಚಾಸಾಃ19 ಪ್ರೆಸಿಡೆಂಟ್ ಹೊಟೇಲಿಗೆ ಹೋದೆವು ಮತ್ತು ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ನೋಡಿದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಟೇಲಿನಲ್ಲಿ ಸಿಸಿ ಕ್ಯಾಮರಾಗಳನ್ನು ಎಲ್ಲಿ ಅಳವಡಿಸಿದ್ದರು ಎಂದು ನಾನು ನೋಡಿದ್ದೇನೆ. ಸಿಸಿ ಕ್ಯಾಮರಾಗಳನ್ನು ಹೊಟೆಲಿನ ಪ್ರವೇಶದಲ್ಲಿ ಮತ್ತು ಲಾಬಿಯಲ್ಲಿ ಅಳವಡಿಸಿದ್ದರು. ಸದರಿ ಎರಡು ಕ್ಯಾಮರಾಗಳು ಚಾಲನೆಯಲ್ಲಿ ಇದೆಯೇ ಇಲ್ಲವೇ ಎಂದು ನಾನು ಮತ್ತು ಚಾಸಾಃ19 ಪರಿಶೀಲಿಸಿರುವುದಿಲ್ಲ.

19. ಕೆನರಾ ಹೊಟೆಲಿನ ಸಿಬ್ಬಂದಿಗಳಿಗೆ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ತೋರಿಸುವಂತೆ ಪೋಲಿಸರು ಪತ್ರ ಕೊಟ್ಟರೋ ಇಲ್ಲವೋ ಎಂದು ನಾವಿಬ್ಬರು ಗಮನಿಸಿರುವುದಿಲ್ಲ. ನಾವು ಹೋದಾಗ ಕೆನರಾ ಹೊಟೇಲಿನ ಮಾಲೀಕರು ಅಲ್ಲಿ ಇರಲಿಲ್ಲ ಆದರೆ ಮ್ಯಾನೆಜರ್ ಇದ್ದರು. ಕೆನರಾ ಹೊಟೇಲಿನಲ್ಲಿ ಎಲ್ಲಿಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದರು ಎಂದು ನಾವಿಬ್ಬರು ಗಮನಿಸಲಿಲ್ಲ. ನಾನಾಗಲಿ ಚಾಸಾಃ 19 ಆಗಲಿ ಪೋಲಿಸರೊಂದಿಗೆ ಪ್ರೆಸಿಡೆಂಟ್ ಹೊಟೇಲಿಗಾಗಲಿ ಕೆನರಾ ಹೊಟೇಲಿಗಾಗಲಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

20. ನಾನು ಮತ್ತು ಚಾಸಾಃ19 ಕ್ಯಾಂಟಿನಿನ ಬಳಿ ಇದ್ದಾಗ ಪೋಲಿಸ ಬಂದು ಮಹಜರಿಗೆ ಕರೆದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-44 ರಂತೆ ನೋಟಿಸನ್ನು ಕೊಟ್ಟರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರೊಂದಿಗೆ ಪ್ರೆಸಿಡೆಂಟ್ ಹೋಟೆಲಿಗೆ ಹೋಗಿ ಸಿಸಿಟಿ ವಿ ಸರ್ವರ್ ರೂಮಿಗೆ ಹೋದೆವು ಮತ್ತು ಅಲ್ಲಿ ಚಾಸಾಃ70 ರವರು ದಿಃ 04-07-2022 ಮತ್ತು 05-07-2022 ರ ದೃಶ್ಯಾವಳಿಗಳನ್ನು ತೋರಿಸಿರುದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ70 ರವರು ತೋರಿಸಿದ ದೃಶ್ಯಾವಳಿಗಳನ್ನು ಪೆನ್ ಡ್ರೈವ್ ಗೆ ಹಾಕಿ ಸಂಗ್ರಹ ಮಾಡಿಕೊಂಡು ಪಂಚನಾಮೆ ಮಾಡಿ ಟೈಪ ಮಾಡಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲಿ ಚಾಸಾಃ19 ಆಗಲಿ ಪ್ರೆಸಿಡೆಂಟ್ ಹೋಟಿಲಿನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪೋಲಿಸರ ಸಮಕ್ಷಮ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಕೆನರಾ ಹೊಟೆಲಿಗೆ ಪೋಲಿಸರೊಂದಿಗೆ ಹೋಗಿ ಯಾವುದೇ ದೃಶ್ಯಾವಳಿಗಳನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮಿಬ್ಬರ ಸಮಕ್ಷಮದಲ್ಲಿ ಯಾವುದೇ ದೃಶ್ಯಾವಳಿಗಳನ್ನು ಪೋಲಿಸರು ಪೆನ್ ಡ್ರೈವ್ ಗೆ ಹಾಕಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-46 ರಿಂದ 50 ಮತ್ತು ನಿಪಿ-52, 53 ಫೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಫೋಟೋಗಳಿಗೂ ಮತ್ತು ನಿಪಿ-45 ಮತ್ತು ನಿಪಿ-51 ಮಹಜರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-54 ಪೆನ್ ಡ್ರೈವನ್ನು ನಮ್ಮಿಬ್ಬರ ಸಮಕ್ಷಮದಲ್ಲಿ ಅಮಾನತ್ತು ಪಡೆಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವಿಬ್ಬರು ಯಾವುದೇ ಪಂಚನಾಮೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆ ಮೇರೆಗೆ ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ1 ಸಂಜಯ ಮತ್ತು ಆತನ ಸಹೋದರರಿಗೆ ನಾನು ಗೆಳೆಯನಾಗಿದ್ದೇನೆ ಎಂದರೆ ಸರಿಯಲ್ಲ. ಆದೇ ರೀತಿ ಚಾಸಾಃ19 ಸಹ ಅವರಿಬ್ಬರಿಗೆ ಗೆಳೆಯ ಎಂದರೆ ಸರಿಯಲ್ಲ. ಪ್ರೆಸಿಡೆಂಟ್ ಹೊಟೇಲ ಮತ್ತು ಕೆನರಾ ಹೊಟೇಲಿನಲ್ಲಿ Hard Disc ನ್ನು ಪೋಲಿಸರು ಅಮಾನತ್ತು ಪಡೆಸಿಕೊಳ್ಳಲ್ಲಿಲ್ಲ. ಚಾಸಾಃ1 ರವರ ಮಾತು ಕೇಳಿಕೊಂಡು ಈದಿನ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-54 ಪೆನ್ ಡ್ರೈವ್ ನಲ್ಲಿರುವ ದೃಶ್ಯಾವಳಿಗಳನ್ನು ಸೃಷ್ಟ ಮಾಡಲಾಗಿದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಆರ್ ಪಿ ವಕೀಲರಿಂದಃ</u>**

21. ಪೋಲಿಸರು ಬಂದು ನಮ್ಮಿಬ್ಬರನ್ನು ಕರೆದು ತಿರುಗಿ ಏಕೆ ಎಂದು ಪ್ರಶ್ನೆ ಮಾಡಿರುವುದಿಲ್ಲ. ಪೋಲಿಸರು ಬಂದು ಕರೆದಾಗ ಯಾವ ಉದ್ದೇಶಕ್ಕಾಗಿ ಕರೆಯುತ್ತಿದ್ದಾರೆ ಎಂದು ನಮಗೆ ಮೊದಲೇ ತಿಳಿದಿತ್ತು ಎಂದರೆ ಸರಿಯಲ್ಲ. ಪೋಲಿಸ ಠಾಣೆಗೆ ನಾನು ಒಂದು ಬಾರಿ ಮಾತ್ರ ಹೋಗಿರುತ್ತೇನೆ. ಬೇರೆ ಪ್ರಕರಣಗಳಲ್ಲಿ ಸಾಕ್ಷಿ ಆಗಿರುವುದಿಲ್ಲ. ನಾನು ವಿದ್ಯಾನಗರ ಪೋಲಿಸ ಠಾಣೆಯ ಖಾಯಂ ಪಂಚಸಾಕ್ಷಿ ಎಂದರೆ ಸರಿಯಲ್ಲ. ಸಿಸಿ ಕ್ಯಾಮರಾದ ಬಗ್ಗೆ ನನಗೆ ಜ್ಞಾನ ಇರುವುದಿಲ್ಲ ಆದರೆ computer, server and network ಬಗ್ಗೆ ಜ್ಞಾನ ಇದೆ. ನಿಪಿ-45 ಮತ್ತು ನಿಪಿ-51 ರ ಒಕ್ಕಣೆಯನ್ನು ನಾನು ಮತ್ತು ಚಾಸಾಃ19 ಹೇಳಿರುತ್ತೇವೆ. ನಿಪಿ-45 ಮತ್ತು ನಿಪಿ-51 ರ ಒಕ್ಕಣೆಯನ್ನು ಪೋಲಿಸರು ಬರೆದುಕೊಂಡು ಬಂದಿದ್ದು ಅದಕ್ಕೆ ನಾವು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಉಳಿದಂತೆ 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸುವುದಾಗಿ ನುಡಿದಿದ್ದಾರೆ.

ಮರುವಿಚಾರಣೆಃ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ )***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು**

ಹುಬ್ಬಳ್ಳಿ